ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 36 ಜಿಪಸ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20-02-2018.

**ಇವರಿಂದ:**

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. **ಕಾರ್ಯದರ್ಶಿ,**
   ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ, ನಂ-8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52
2. **ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,**
3. **ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್,**
4. **ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್.**

**ಮಾನ್ಯರೆ,**

**ವಿಷಯ:** ಹೊಸದಾಗಿ ಕಿತ್ತೂರು ತಾಲ್ಲೂಕು ಪಂಚಾಯತ್ ಘೋಷಣೆ ಮಾಡಿರುವ ಅಧಿಸೂಚನೆಯ ಪ್ರತಿಯನ್ನು ಕಳುಹಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ: 07-02-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯಲ್ಲಿ ಸರ್ಕಾರವು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 302 (ಎ) ರನ್ವಯ ಕಿತ್ತೂರು ತಾಲ್ಲೂಕು ಪಂಚಾಯಿತಿಯನ್ನು ಘೋಷಣೆ ಮಾಡಿರುವ ಅಧಿಸೂಚನೆಯನ್ನು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ದಿನಾಂಕ:07-02-2018 ರಂದು ಪ್ರಕಟಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

20/2/2018

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:**

ವ್ಯವಸ್ಥಾಪಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಸೂಚನೆಯ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ-IVA<br>Part-IVA | ಬೆಂಗಳೂರು, ಬುಧವಾರ, ಫೆಬ್ರವರಿ ೭, ೨೦೧೮ (ಮಾಘ ೧೮, ಶಕ ವರ್ಷ ೧೯೩೯)<br>Bengaluru, Wednesday, February 7, 2018 (Magha 18, Shaka Varsha 1939) | ನಂ. ೨೫೨<br>No. 252 |
|---|---|---|

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

**ಸಂಖ್ಯೆ: ಗ್ರಾಅಪ 36 ಜಿಪಸ 2017, ಬೆಂಗಳೂರು, ದಿನಾಂಕ: 07-02-2018**

ಸರ್ಕಾರವು, ಅಧಿಸೂಚನೆ ಸಂಖ್ಯೆ:ಕಂಇ/09/ಭೂದಾಮು/2012, ದಿನಾಂಕ:15-03-2013 ರಂದು ಬೈಲಹೊಂಗಲ ತಾಲ್ಲೂಕಿನಿಂದ ಬೇರ್ಪಡಿಸಿ, ಕಿತ್ತೂರು ತಾಲ್ಲೂಕನ್ನು ದಿನಾಂಕ:15-03-2013 ರಿಂದ ಜಾರಿಗೆ ಬರುವಂತೆ ರಚಿಸಿರುವುದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 133 ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಪ್ರಾದೇಶಿಕ ಆಯುಕ್ತರು, ಬೆಳಗಾವಿ ಇವರು ಈ ಹಿಂದೆ ಅಧಿಸೂಚನೆ ಸಂಖ್ಯೆ: ಕ್ರ:ಪ್ರಾಆಬೆ:ಜಿಪಂ:ಅಧಿಸೂಚನೆ:ವಿವ-03:2015-16 ದಿನಾಂಕ: 30-03-2016 ರಂದು ಬೈಲಹೊಂಗಲ ತಾಲ್ಲೂಕು ಪಂಚಾಯತಿಗೆ ಆಯ್ಕೆಯಾದ ಸದಸ್ಯರುಗಳ ಹೆಸರುಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿರುವುದರಿಂದ,

ಅಧಿನಿಯಮದ ಪ್ರಕರಣ 120ರಲ್ಲಿ ನಿರ್ಧಿಷ್ಟಪಡಿಸಿರುವಂತೆ ಪ್ರತಿಯೊಂದು ತಾಲ್ಲೂಕಿಗೆ ಒಂದು ತಾಲ್ಲೂಕು ಪಂಚಾಯತಿಯನ್ನು ರಚಿಸಬೇಕಾಗಿರುವುದರಿಂದ ಅಧಿನಿಯಮದ ಪ್ರಕರಣ 302(ಎ) ಪ್ರಕಾರ ತಾಲ್ಲೂಕು ಪಂಚಾಯತಿಯ ಸದಸ್ಯರ ಹುದ್ದೆಯ ಅವಧಿಯಲ್ಲಿ ಅಂತಹ ತಾಲ್ಲೂಕು ಪರಿಮಿತಿಗಳನ್ನು ಬದಲಾವಣೆ ಮಾಡಿ ಹೊಸ ತಾಲ್ಲೂಕನ್ನು ರಚಿಸಿ ಅಂಥಹ ಹೊಸ ತಾಲ್ಲೂಕಿಗೆ ಒಂದು ತಾಲ್ಲೂಕು ಪಂಚಾಯತ್ ಇರತಕ್ಕದ್ದು ಮತ್ತು ಇದು ಹೊಸ ತಾಲ್ಲೂಕಿನಲ್ಲಿ ಸೇರ್ಪಡೆಯಾದ ಪ್ರದೇಶದ ಪೂರ್ಣ ಅಥವಾ ಬಹುಭಾಗವು ಇರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯತ್ ಸದಸ್ಯರನ್ನು ಮತ್ತು 120ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಇತರ ಸದಸ್ಯರನ್ನು ಹೊಂದಿರತಕದ್ದು ಮತ್ತು ಈಗಾಗಲೇ ನಿರ್ಧರಿಸಲಾದ ಮತ್ತು ಅಸ್ತಿತ್ವದಲ್ಲಿದ್ದ ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯ ಅನುಸಾರವಾಗಿ ಕಡಿಮೆಯಾಗತಕ್ಕದ್ದು ಎಂದು ತಿಳಿಸಿರುವುದರಿಂದ,

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 302(ಎ) ರೊಂದಿಗೆ ಓದಿಕೊಂಡಂತೆ ಪ್ರಕರಣ 133ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರು ಪ್ರಾದೇಶಿಕ ಆಯುಕ್ತರ, ಕಾರ್ಯಾಲಯ, ಬೆಳಗಾವಿ ವಿಭಾಗ ಕಛೇರಿಯ ಅಧಿಸೂಚನೆ ಸಂಖ್ಯೆ:ಕ್ರ:ಪ್ರಾಆಬೆ:ಜಿಪಂ: ತಾಪಂ:ಅಧಿಸೂಚನೆ:ವಿವ-03:2015-16, ದಿನಾಂಕ: 30-03-2016ನ್ನು ಮಾರ್ಪಡಿಸಿ, ಪ್ರಸ್ತುತ ಅಸ್ಥಿತ್ವದಲ್ಲಿರುವ ಬೈಲಹೊಂಗಲ ತಾಲ್ಲೂಕು ಪಂಚಾಯತ್ ಸದಸ್ಯರುಗಳ ವಿವರಗಳನ್ನು ಹಾಗೂ ಹೊಸದಾಗಿ

ಸೃಜಿಸಲಾಗಿರುವ ಕಿತ್ತೂರು ತಾಲ್ಲೂಕು ಪಂಚಾಯತಿಗೊಳಪಡುವ ಚುನಾಯಿತ ಸದಸ್ಯರುಗಳ ಹೆಸರುಗಳನ್ನು ಅನುಕ್ರಮವಾಗಿ ಅಧಿಸೂಚನೆ ಸಂಖ್ಯೆ:ಪ್ರಾಆಬೆ:ತಾಪಂ:ಅಧಿಸೂಚನೆ: ಬೆಜಿವಿವ-2:2017-18, ದಿನಾಂಕ: 07-06-2017 ಹಾಗೂ ಅಧಿಸೂಚನೆ ಸಂಖ್ಯೆ:ಪ್ರಾಆಬೆ:ತಾಪಂ: ಅಧಿಸೂಚನೆ:ಬೆಜಿವಿವ-01:2017-18, ದಿನಾಂಕ: 07-06-2017 ರಂದು ಪ್ರಕಟಿಸಲಾಗಿರುತ್ತದೆ.

ಆದುದರಿಂದ ಸರ್ಕಾರವು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 302 ಉಪ ಪ್ರಕರಣ (2)ರನ್ವಯ ಹಾಗೂ ಪ್ರಕರಣ 321 ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಕಿತ್ತೂರು ತಾಲ್ಲೂಕು ಪಂಚಾಯಿತಿಯು ದಿನಾಂಕ:07-02-2018 ರಂದು ಜಾರಿಗೆ ಬರುವಂತೆ ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಪಿ. ದೇವಸಹಾಯಂ**
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 1000